ವಿಷಯ ಕೇಳಿದ. ಆಗ ಅವರು ದೊಡ್ಡದೊಂದು ಶ್ವಾಸ ಬಿಟ್ಟು, 'ನೋಡಿ ಮಿಸ್ಟರ್ ಮೂರ್ತಿ, ಮಗ ಮಗಳು ಇದ್ದರೂ ನಾನು ಒಂಟಿ. ಮಗ ಸೊಸೆ ಮೊಮ್ಮಕ್ಕಳು ಎಲ್ಲರೂ ಆಸ್ಟ್ರೇಲಿಯಾದಲ್ಲಿ. ಮಗಳು ಅಳಿಯ ಮೊಮ್ಮಕ್ಕಳು ಚೆನ್ನೈಯಲ್ಲಿ. ಎಲ್ಲರಿಗೂ ನಾನು ಹೊಸದಾಗಿ ತೆಕ್ಕೊಂಡ ಈ ಫ್ಲ್ಯಾಟಿನ ಮೇಲೆ ಕಣ್ಣು. ನನ್ನ ಹೆಸರಿಗೆ ಬರಿ ಅಂತ ಎಲ್ಲರದ್ದೂ ಒತ್ತಾಯ. ನಂಗೆ ಮಾತ್ರ ಯಾರು ನನ್ನನ್ನು ಚೆನ್ನಾಗಿ ನೋಡಿಕೊಳ್ತಾರೋ ಅವರ ಹೆಸರಿಗೆ ಬರೀಬೇಕು ಅಂತ ಆಸೆ. ನಂಗೆ ಎಂಬತ್ತಾಯ್ತು. ಜೊತೆಗೆ ಹಾರ್ಟಿನ ತೊಂದ್ರೆ ಸಾ ಉಂಟು. ಯಾರಾದ್ರೂ ನನ್ನನ್ನು ನೋಡಿಕೊಳ್ಳಿ ಅಂತ ಹೇಳಿದ್ರೆ ನೀನು ಯಾರಿಗೆ ಬೇಕು ಮುದುಕಾ ಅಂತ ಮಕ್ಕಳು ಕೇಳ್ತಾರೆ. ಸಣ್ಣ ಪ್ರಾಯದಲ್ಲಿ ಹೆಂಡತಿಯನ್ನು ಕಳಕೊಂಡು ಮತ್ತೊಂದು ಮದುವೆ ಆಗದೆ ಬ್ಯಾಂಕಿನ ಕೆಲಸದ ಜೊತೆಗೆ ಊರಿಂದ ಊರಿಗೆ ಅಲೀತಾ ರಕ್ತ ನೀರು ಒಂದು ಮಾಡಿ ಅವುಗಳನ್ನು ಬೆಳಸಿದೆ. ಈಗ ನೋಡಿದ್ರೆ ಹೀಗೆ' ಅಂತ ಹೇಳಿ ದಿಣ್ಣ ಕೂಗಿದ್ದರು. ವಿಷ್ಣುಮೂರ್ತಿಗೆ ಒಂದು ನಮೂನಿ ಆಯ್ತು. 'ನೋಡಿ, ನಾನು ಸಣ್ಣ ಪ್ರಾಯದಲ್ಲಿ ಅಪ್ಪ ಅಮ್ಮನನ್ನು ಕಳಕೊಂಡವ. ನನಗೂ ಯಾರೂ ದಿಕ್ಕಿಲ್ಲ. ನನ್ನ ನೆಂಟರು ಇಷ್ಟರು ಕಷ್ಟಕಾಲದಲ್ಲಿ ನನ್ನ ಕೈ ಬಿಟ್ಟಿದ್ದರು. ಕಷ್ಟಪಟ್ಟು ನಾನು ಈ ಹಂತಕ್ಕೆ ಬಂದವ. ನೀವೇ ನನ್ನ ತಂದೆಯ ಹಾಗೆ' ಅಂತ ಹೇಳಿದ್ದ. ಅವತ್ತಿನಿಂದ ಅವರಿಬ್ಬರೂ ಆತ್ಮೀಯರಾಗಿದ್ರು. ದಿನವೂ ಒಟ್ಟಿಗೇ ವಾಕಿಂಗಿಗೆ ಹೋಗುದು, ಪರಾಶರನ್ ಅವರು ಮೂರ್ತಿಯ ಮನೆಗೆ ತಿಂಡಿಗೆ ಊಟಕ್ಕೆ ಬರೂದು ಅವರನ್ನು ಡಾಕ್ಟರರ ಹತ್ರ ಕರಕೊಂಡು ಹೋಗುದು, ಬೇಕಾಗಿದ್ದ ಮೆಡಿಸಿನ್, ಸಾಮಾನು ಎಲ್ಲ ಮೂರ್ತಿ ತಂದುಕೊಡುದು ಎಲ್ಲ ಆಗ್ತಾ ಇತ್ತು. ಒಂದು ಸರ್ತಿ ಬೆಳಗ್ಗೆ ತಿಂಡಿಗೆ ಬಂದಿದ್ದ ಪರಾಶರನ್, 'ವಿಷ್ಣುಮೂರ್ತಿ... ಯಾವ ಜನ್ಮದ ಋಣವೋ ನೀನು ನನ್ನ ಮಗನ ಹಾಗೆ ಇದ್ದೀಯ. ನನ್ನ ನಂತರಕ್ಕೆ ಫ್ಲ್ಯಾಟು ಸೇವಿಂಗ್ಸು ಎಲ್ಲ ನಿಂಗೆ. ಎಲ್ಲ ಸಾ ನಿನ್ನ ಹೆಸರಿಗೆ ಬರೀತೇನೆ.' ಅಂತ ಹೇಳಿದ್ದರು. ಆಗ ಅವ, 'ಸರ್... ಅದೆಲ್ಲ ಬೇಡ. ನಿಮ್ಮ ಪ್ರೀತಿ ಆಶೀರ್ವಾದ ಇದ್ದರೆ ಸಾಕು' ಅಂದಿದ್ದ. ಆದರೆ, ಸ್ಮಿತಾಳಿಗೆ ಅನಾಯಾಸವಾಗಿ ಬರುವ ಆಸ್ತಿಯನ್ನು ಗಂಡ ಬೇಡ ಅಂತ ಹೇಳ್ತಾನೆ ಅಂತ ಸಿಟ್ಟು ಬಂದಿತ್ತು. ಹಾಗಾಗಿ ಗಂಡ ಮಕ್ಕಳು ಹೊರಗೆ ಹೋದಾಗ ಆಗಾಗ ಪರಾಶರನ್ ಅವರ ಫ್ಲ್ಯಾಟಿಗೆ ಹೋಗಿ ಅವರನ್ನು ಮಾತಾಡಿಸಿ ಬರುತ್ತಿದ್ದಳು. ನಿಮಿಗೆ ಇಷ್ಟ ಅಂತ ಪೊಂಗಲ್ ಮಾಡಿದ್ದೇನೆ ಅಂತಲೋ, ಕೂಟು ಮಾಡಿದ್ದೇನೆ ಅಂತಲೋ ಹೋಗಿ ಕೊಟ್ಟು ಬರುತ್ತಿದ್ದಳು.



ವಿಷ್ಣುಮೂರ್ತಿಗೆ ಹೀಗಾದಾಗ ಆಸ್ಪತ್ರೆಗೆ ಬಂದಿದ್ದ ಪರಾಶರನ್ ಅವನ ಕೈ ಹಿಡ್ಕೊಂಡು ತುಂಬ ಹೊತ್ತು ಕೂತಿದ್ದರು. ಸ್ಮಿತಾಳ ಹತ್ರ, 'ಮೂರ್ತಿಗೆ ಎಂತ ಸಾ ಆಗೂದಿಲ್ಲ. ದೇವರಿದ್ದಾನೆ. ಹೆದರಬೇಡಿ' ಅಂದಿದ್ದರು. ಅವ ಡಿಸ್‌ಚಾರ್ಜ್ ಆಗಿ ಮನೆಗೆ ಬಂದ ಮೇಲೆ ಒಂದು ಸಲ ಸಾ ನೋಡ್ಲಿಕ್ಕೆ ಅಂತ ಬಂದಿರಲಿಲ್ಲ. ಫೋನ್ ಮಾಡಿದ್ರೆ, 'ನಂಗೆ ಸಾ ತುಂಬ ಹುಷಾರಿಲ್ಲ ಮೂರ್ತಿ. ಮನೇ ಒಳಗೆ ಓಡಾಡ್ತಾ ಇದ್ದೇನೆ. ನೀನು ಮನೆಗೆ ಬಂದ್ಯಲ್ಲಾ ಅಷ್ಟೇ ಸಾಕು. ನಾನು ಹುಷಾರಾದ ಮೇಲೆ ಕಾಣ್ತೇನೆ.' ಅಂದಿದ್ದರು.

ಅವತ್ತು ಗಂಡನ ಹತ್ರ ಬೆಕ್ಕಿನ ವಿಷಯದ ಬಗ್ಗೆ ಜಗಳ ಆಡಿದ ಸ್ಮಿತಾಳಿಗೆ ಪರಾಶರನ್ ಅವರನ್ನು ವಿಚಾರಿಸುವ ಉಮೇದಿ ಬಂತು. ಬೆಳಗ್ಗೆ ತಿಂಡಿಗೆ ಅಂತ ಮಾಡಿದ್ದ ಬಿಸಿಬೇಳೆಬಾತನ್ನು ಸ್ವಲ್ಪ ತೆಕ್ಕೊಂಡು ಹೊರಟಳು. ಬಾಗಿಲ ಹತ್ರ ಬಂದಾಗ ಆ ಕರಿಬೆಕ್ಕು ಮ್ಯಾಂವ್ ಮ್ಯಾಂವ್ ಅಂತ ಎದುರಾಯ್ತು. ಅವಳ ತಲೆಯಲ್ಲಿ ಒಂದು ಐಡಿಯಾ ಬಂತು. ಮೆಲ್ಲ ಅದನ್ನು ಪ್ರೀತಿಯಿಂದ ಎತ್ತಿಕೊಂಡಳು. ಅದೂ